ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

880(1325) ಶ್ರೀ ವಿಶ್ವನಾಥ ಹೆಚ್. ಎಂ. (ಸಕಲೇಶಪುರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆ ಅರಣ್ಯ ಇಲಾಖೆಗೆ ಜೆ.ಬಿ.ಐ.ಸಿ. ಯೋಜನೆ ಅಡಿ ಬಂದಿರುವ ಅನುದಾನ ಎಷ್ಟು;

ಆ) ಈ ಯೋಜನೆಯಲ್ಲಿ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಿಗೆ ಬಂದಿರುವ ಅನುದಾನ ಎಷ್ಟು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಬಿಡುಗಡೆಯಾದ ಅನುದಾನ ಲಕ್ಷ ರೂ.ಗಳಲ್ಲಿ

ವರ್ಷ	ಪ್ರಾದೇಶಿಕ ವಿಭಾಗ	ಸಾಮಾಜಿಕ ವಿಭಾಗ	ಒಟ್ಟು
1997–2005 (31–12–2004) ರವರೆಗೆ	1229.46	480.43	1709.89

ಆ) ಸಕಲೇಶಪುರ ತಾಲ್ಲೂಕ್ ಜೆಬಿಐಸಿ ಯೋಜನೆಯ ವ್ಯಾಪ್ತಿಗೆ ಒಳಪಡದ ಕಾರಣ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಆಲೂರು ತಾಲ್ಲೂಕನ್ನು ಸರ್ಕಾರಿ ಆದೇಶ ಸಂಖ್ಯೆ: ಅಪಜೀ 152 ಎಪ್‌ಎಪಿ 99, ದಿನಾಂಕ: 11–10–99 ರಲ್ಲಿ ಜೆಬಿಐಸಿ ಯೋಜನೆಯ ವ್ಯಾಪ್ತಿಗೆ ಸೇರಿಸಿದ ಕಾರಣ ಈ ತಾಲ್ಲೂಕಿಗೆ ಬಿಡುಗಡೆಯಾದ ಅನುದಾನ ಕೆಳಕಂಡಂತಿದೆ.

ವರ್ಷ	ಆಲೂರು ತಾಲ್ಲೂಕು ಪ್ರಾದೇಶಿಕ ವಿಭಾಗ (ರೂ. ಲಕ್ಷಗಳಲ್ಲಿ)	ಷರಾ
1999–2005 (31–12–2004) ರವರೆಗೆ	39.801	ಆಲೂರು ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ವಲಯ ಇರುವುದಿಲ್ಲ.

881(694) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಈವರೆಗೂ ಕೆ.ಪಿ.ಟಿ.ಸಿ.ಎಲ್. ಗೆ ಬರಬೇಕಾದ ಬಾಕಿ ಮೊತ್ತವೆಷ್ಟು ಹಾಗೂ ಇದರಲ್ಲಿ ಅಸಲು ಮತ್ತು ಬಡ್ಡಿ ಎಷ್ಟು (ವಿವರ ಒದಗಿಸುವುದು);

ಆ) ಕೆ.ಪಿ.ಟಿ.ಸಿ.ಎಲ್. ಸಿಸ್ಟಂ ಸುಧಾರಣೆಗೆ ಕೇಂದ್ರ ಸರ್ಕಾರದ ಯಾವ ಯಾವ ಸಂಸ್ಥೆಯಿಂದ ಎಷ್ಟೆಷ್ಟು ಹಣದ ಸಾಲ ಸೌಲಭ್ಯಗಳನ್ನು ಹಾಗೂ ಅನುದಾನವನ್ನು ಪಡೆಯಲಾಗಿದೆ;

ಇ) ಈ ಹಣವನ್ನು ಯಾವ ಬಾಬ್ತಿಗೆ ಉಪಯೋಗಿಸಲಾಗಿದೆ;

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ನಿಟ್ಟಿನಲ್ಲಿ ಮಾಡಿದ ಖರ್ಚು ಮತ್ತು ಸಾಧಿಸಿದ ಪ್ರಗತಿಯೇನು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ದಿನಾಂಕ 31–12–2004 ರ ಅಂತ್ಯದಲ್ಲಿದ್ದಂತೆ ರಾಜ್ಯದಲ್ಲಿರುವ ನಾಲ್ಕೂ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬರಬೇಕಾಗಿದ್ದ

ಬಾಕಿಯ ಮೊತ್ತ 2413.89 ಕೋಟಿ ರೂ.ಗಳು.

ಇದರಲ್ಲಿ ಅಸಲು 2120.30 ಕೋಟಿ ರೂ.ಗಳು.

ಮತ್ತು ಬಡ್ಡಿ 293.59 ಕೋಟಿ ರೂ.ಗಳು.

ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳು ಈ ಕೆಳಕಂಡಂತಿವೆ.

(ಕೋಟಿ. ರೂ.ಗಳಲ್ಲಿ)

ಕ್ರ. ಸಂ.	ಕಂಪನಿಯ ಹೆಸರು	ಒಟ್ಟು ಬಾಕಿ ಮೊತ್ತ	ಅಸಲು	ಬಡ್ಡಿ
1	ಬೆಂ.ವಿ.ಸ.ಕಂಪನಿ	1002.97	853.78	149.19
2	ಮಂ.ವಿ.ಸ.ಕಂಪನಿ	473.56	422.38	51.18
3	ಹು.ವಿ.ಸ.ಕಂಪನಿ	500.66	452.36	48.30
4	ಗು.ವಿ.ಸ.ಕಂಪನಿ	436.70	391.78	44.92
	ಒಟ್ಟು	**2413.89**	**2120.30**	**293.59**

ಆ) ಕೆ.ಪಿ.ಟಿ.ಸಿ.ಎಲ್. ಸಿಸ್ಟಂ ಸುಧಾರಣೆಗೆ ಕೇಂದ್ರ ಸರ್ಕಾರದ ಸಂಸ್ಥೆಗಳಿಂದ ದಿನಾಂಕ 31–12–2004 ರವರೆಗೆ ಪಡೆದ ಸಾಲ ಮತ್ತು ಅನುದಾನದ ವಿವರಗಳು ಕೆಳಕಂಡಂತಿದೆ.

(ಕೋಟಿ. ರೂ.ಗಳಲ್ಲಿ)

ಸಂಸ್ಥೆಯ ಹೆಸರು	ಸಾಲ	ಅನುದಾನ	ಒಟ್ಟು
ಕೇಂದ್ರ ಸರ್ಕಾರದ ಇಂಧನ ಇಲಾಖೆ, ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮಕ್ಕೆ (ಎಪಿಡಿಆರ್‌ಪಿ)	217.725	217.725	435.450
ಗ್ರಾಮೀಣ ವಿದ್ಯುದ್ಧೀಕರಣ ನಿಗಮ (ಆರ್.ಇ.ಸಿ)			
1. ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮಕ್ಕೆ (ಎಪಿಡಿಆರ್‌ಪಿ)	306.518	–	306.518
2. ಸಿಸ್ಟಂ ಸುಧಾರಣೆಗೆ	583.910	–	583.910
ವಿದ್ಯುತ್ ಹಣಕಾಸು ನಿಗಮ (ಎ.ಎಫ್.ಸಿ) ಸಿಸ್ಟಂ ಸುಧಾರಣೆಗೆ	619.710	–	619.710
ಒಟ್ಟು (ಕೋಟಿ ರೂ.ಗಳಲ್ಲಿ)	**1727.863**	**217.725**	**1945.588**

ಇ) ಈ ಹಣವನ್ನು ಸಿಸ್ಟಂ ಸುಧಾರಣೆಯು ಈ ಕೆಳಕಂಡ ಯೋಜನೆಗಳಿಗೆ ಉಪಯೋಗಿಸಲಾಗಿದೆ.

1) ಹೊಸ ವಿದ್ಯುತ್ ಪ್ರಸರಣಾ ಮಾರ್ಗಗಳ ನಿರ್ಮಾಣ ಮತ್ತು ಹೊಸ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆ.

2) ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮ (ಎಪಿಡಿಆರ್‌ಪಿ)

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ನಿಟ್ಟಿನಲ್ಲಿ ಮಾಡಿದ ಖರ್ಚು ಮತ್ತು ಸಾಧಿಸಿದ ಪ್ರಗತಿ ಕೆಳಗಿನಂತಿವೆ.

1) ಪ್ರಸರಣ ಮಾರ್ಗಗಳು ಮತ್ತು ಉಪ–ಕೇಂದ್ರಗಳ ಸ್ಥಾಪನೆಯ ಕೆಲಸಗಳಲ್ಲಿ ಕ.ವಿ.ಪ್ರ.ನಿ.ನಿ. ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 31–12–2004 ರವರೆಗೆ ಸಾಧಿಸಿದ ಪ್ರಗತಿ.

1) ಪವರ್ ಫೈನಾನ್ಸ್ ಕಾರ್ಪೋರೇಷನ್ನಿನ ಸಾಲಸೌಲಭ್ಯದಿಂದ ಕೈಗೊಂಡ ಯೋಜನೆಗಳು:

	ಮಾಡಲಾದ ವೆಚ್ಚ (ಕೋಟಿ ರೂ.ಗಳಲ್ಲಿ)
ಅ) ಕೇಮಾರ್‌ನಿಂದ ಗುರುವಾಯನಕೆರೆವರೆಗೆ 220 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗವನ್ನು ಅಳವಡಿಸುವುದು ಮತ್ತು ಗುರುವಾಯನಕೆರೆಯಲ್ಲಿ 110/33/11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವುದು.	33.71
ಆ) ವಿಟ್ಲದಲ್ಲಿರುವ 110 ಕೆ.ವಿ. ವಿದ್ಯುತ್ ಉಪ–ಕೇಂದ್ರದಲ್ಲಿ 10 ಎಂ.ವಿ.ಎ. ಸಾಮರ್ಥ್ಯದ ಎರಡನೇ ಪರಿವರ್ತಕವನ್ನು ಹೆಚ್ಚುವರಿಯಾಗಿ ಸ್ಥಾಪಿಸುವುದು.	0.99
ಒಟ್ಟು	**34.70**

2) ಗ್ರಾಮೀಣ ವಿದ್ಯುದ್ಧೀಕರಣ ನಿಗಮದ ಸಾಲ ಸೌಲಭ್ಯದಿಂದ ಕೈಗೊಂಡ ಯೋಜನೆಗಳು:

	ಮಾಡಲಾದ ವೆಚ್ಚ (ಕೋಟಿ ರೂ.ಗಳಲ್ಲಿ)
ಅ) ಕಾಟಿಪಳ್ಳ 33/11 ಕೆ.ವಿ. ವಿದ್ಯುತ್ ಉಪ–ಕೇಂದ್ರದಲ್ಲಿ ಒಂದು 5 ಎಂ.ವಿ.ಎ. ಸಾಮರ್ಥ್ಯದ ಪರಿವರ್ತಕವನ್ನು ಹೆಚ್ಚುವರಿಯಾಗಿ ಅಳವಡಿಸುವುದು.	0.39

ಆ)	ಕಾವೂರಿನಿಂದ ತಣ್ಣೀರುಬಾವಿಗೆ 220 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ	1.95
	ಒಟ್ಟು	**12.34**

ಕ.ವಿ.ಪ್ರ.ನಿ.ನಿ.ಯಿಂದ ಖರ್ಚಾದ ಒಟ್ಟು ಹಣ 47.04

1) ಎ.ಪಿ.ಡಿ.ಆರ್.ಪಿ. ಯೋಜನೆಯಡಿಯಲ್ಲಿ ಮೆಸ್ಕಾಂವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 31-12-2004 ರವರೆಗೆ ಸಾಧಿಸಿರುವ ಪ್ರಗತಿಯ ವಿವರಗಳು:

		ಭೌತಿಕ ಸಾಧನೆ	ಆರ್ಥಿಕ ಪ್ರಗತಿ (ಲಕ್ಷ ರೂ.ಗಳಲ್ಲಿ)
ಅ)	11 ಕೆವಿ ಲಿಂಕ್‌ಲೈನ್‌ಗಳು (ಕಿ.ಮೀ.ಗಳಲ್ಲಿ)	12	21.72
ಆ)	11 ಕೆವಿ ವಾಹಕ ಬದಲಾವಣೆ (ಕಿ.ಮೀ.ಗಳಲ್ಲಿ)	16	20.11
ಇ)	ಹೊಸ ಪರಿವರ್ತಕಗಳು (ಸಂಖ್ಯೆಗಳಲ್ಲಿ)	15	13.5
ಈ)	ಎಲ್.ಟಿ.ವಾಹಕ ಬದಲಾವಣೆ (ಕಿ.ಮೀ.ಗಳಲ್ಲಿ)	247	397.86
ಉ)	ಹೊಸ ಎಲ್.ಟಿ.ಲೈನ್‌ಗಳು (ಕಿ.ಮೀ.ಗಳಲ್ಲಿ)	3	7.887
ಊ)	ಎಲ್.ಟಿ. ಸಿಂಗಲ್ ಫೇಸ್‌ನಿಂದ ಮೂರು ಫೇಸ್ ಪರಿವರ್ತನೆ (ಕಿ.ಮೀ.ಗಳಲ್ಲಿ)	49	78.4
	ಒಟ್ಟು		**539.47**

882(1150) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು): ಮಾನ್ಯ ಅಲ್ಪಸಂಖ್ಯಾತ ಕಲ್ಯಾಣ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಒಳಪಟ್ಟ ಯುವಕ ಸಂಘಗಳು ಎಷ್ಟು, ಯುವತಿ ಮಂಡಳಗಳು ಮತ್ತು ಹವ್ಯಾಸಿ ಬಳಗಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಸದರಿ ಸಂಘಗಳಲ್ಲಿ ಎಷ್ಟು ಸಂಘಗಳಿಗೆ ಸ್ವಂತ ಕಟ್ಟಡದ ವ್ಯವಸ್ಥೆಯನ್ನು ಒದಗಿಸಿಕೊಡಲಾಗಿದೆಯೇ; ಸದರಿ ಯೋಜನೆ ಯಡಿಯಲ್ಲಿ ಜಿಲ್ಲೆಯ ಎಷ್ಟು ಶಾಲಾ ಕಾಲೇಜುಗಳ ಆಟದ ಮೈದಾನಗಳ ಅಭಿವೃದ್ಧಿಗಾಗಿ ಸರ್ಕಾರ ನೆರವನ್ನು ನೀಡಿದೆ ಮತ್ತು ಅದರ ಮೊತ್ತ ಎಷ್ಟು;